# <u>ಆರೇನ ಮಾಡುವರು ಆರಿಂದಲೇನಹುದು</u>

(Version 2)

1. **Ref.:** Dasara Padagalu – Purandara Dasara Keerthane, Vol 2, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Ref.: Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
3. **Note:** The lyrics given in the book mentioned in Ref. 1 above are similar to that of the singer. They are given in yellow highlights. But the lyrics are slightly different in the book mentioned in Ref. 2 above. They are given separately without highlights.

ರಾಗ ಮುಖಾರಿ ಝಂಪೆ ತಾಳ

ಆರೇನು ಮಾಡುವರು ಆರಿಂದಲೇನಹುದು
ಪೂರ್ವ ಜನ್ಮದ ಕರ್ಮ ವಿಧಿ ಬೆನ್ನ ಬಿಡಿದು || ಪ ||

ಐದು ವರ್ಷದ ಹಸುಳ ವನವೆತ್ತ ತಪವೆತ್ತ
ಬೈದು ಮಲತಾಯಿಯಡವಿಗೆ ನೂಕಲು
ಸುಯ್ಯು ಕೋಪಾಗ್ನಿಯಲಿ ಪುರ ಹೊರಟು ಪೋಪಾಗ
ಐದೆ ಪಿತರುಗಳಿದ್ದು ಏನು ಮಾಡಿದರು || 1 ||

ಪಾಪಿ ದುಶ್ಶಾಸನ ದ್ರೌಪದಿಯ ಸೀರೆಯ ಸೆಳೆದು
ಕೋಪದಿಂ ಮಾನಭಂಗವ ಮಾಡಲು
ಶ್ರೀಪತಿಯೆ ಕಾಯೆಂದು ಮೊರೆಯಿಡುವ ಸಮಯದಲಿ
ಭೂಪರೈವರು ಇದ್ದು ಏನು ಮಾಡಿದರು || 2 ||

ರಣದೊಳಗೆ ಅಭಿಮನ್ಯು ಚಕ್ರವ್ಯೂಹವ ಪೊಕ್ಕು
ಸೆಣಸಿ ಷಡುರಥರೊಡನೆ ಹೊಯ್ದಾಡಲು
ಅಳಕವಿಲ್ಲದೆ ಕಾಡುತಸುವಳಿದು ಪೋಪಾಗ
ತ್ರಿನಯನಸಖ ಪಾರ್ಥರಿದ್ದೇನು ಮಾಡಿದರು || 3 ||

ನೃಪರೊಳಗೆ ಅತಿ ಶ್ರೇಷ್ಠ ಬಲವಂತ ಸಿರಿ ರಾಮ
ಅಪರಿಮಿತ ಶೌರಿ ಲಕ್ಷ್ಮಣ ದೇವರು
ಚಪಲಾಕ್ಷಿ ಸೀತೆಯನು ಖಳನು ಕದ್ದೊಯ್ವಾಗ
ನಿಪುಣರಿವರಿದ್ದು ಇನ್ನೇನು ಮಾಡಿದರು || 4 ||

ಆರೇನು ಮಾಡುವರು ಆರಿಂದಲೇನಹುದು
ಪೂರ್ವ ಜನ್ಮದ ಕರ್ಮ ವಿಧಿ ಬೆನ್ನ ಬಿಡಿದು

ಐದು ವರ್ಷದ ತರಳ ತಾನೆತ್ತ ತಪವೆತ್ತ
ಬೈದು ಮಲತಾಯಿ ಅಡವಿಗೆ ನೂಕಲು
ಸುಯ್ಯು ಕೋಪಾಗ್ನಿಯಲಿ ಪೊರಮಟ್ಟು ಪೋಪಾಗ
ಐದೆ ಬಂಧುಗಳಿದ್ದು ಏನು ಮಾಡಿದರು

ನೃಪರೊಳಗೆ ಅತಿ ಶ್ರೇಷ್ಠ ಬಲವಂತ ರಘುರಾಮ
ಅಪರಿಮಿತ ಶೂರ ಲಕ್ಷ್ಮಣ ದೇವರು
ಚಪಲಾಕ್ಷಿ ಸೀತೆಯನು ಖಳನು ಕದ್ದೊಯ್ವಾಗ
ವಿಪರೀತ ವೀರರಿದ್ದೇನ ಮಾಡಿದರು

ಪಾಪಿ ದುಶ್ಶಾಸನ ದ್ರೌಪದಿಯ ಸೀರೆಯ ಸುಲಿದು
ಕೋಪದಿಂ ಮಾನಭಂಗವ ಮಾಡಲು
ಆಪತ್ತು ಬೆನ್ನಟ್ಟಿ ಹಾ ಕೃಷ್ಣ! ಎನುವಾಗ
ಭೂಪತಿಗಳೈವರಿದ್ದೇನು ಮಾಡಿದರು

ರಣದೊಳಗೆ ಅಭಿಮನ್ಯು ಚಕ್ರವ್ಯೂಹವ ಪೊಕ್ಕು
ಸೆಣಸಿ ಷಡುರಥರೊಡನೆ ಹೊಯ್ದಾಡಲು
ಅಣಕವಿಲ್ಲದೆ ಕಾದಿ ಅಸುವಳಿದು ಪೋಪಾಗ
ತ್ರಿಣಯಸಖ ಪಾರ್ಥರಿದ್ದೇನ ಮಾಡಿದರು

| | |
|---|---|
| ಬ್ರಹ್ಮಶಿರ ಶಿವನ ಕರವನು ಕಚ್ಚಿ ಕಾಡುತಿರೆ | ಬ್ರಹ್ಮಶಿರ ಕರ ಕಚ್ಚಿ ಶಿವನ ಪೀಡಿಸುತಿರಲು |
| ಸುಮ್ಮನೆ ಜಗವೆಲ್ಲ ತಿರುಗುತಿರಲು | ಸುಮ್ಮನೆ ಜಗವನೆಲ್ಲವ ತಿರುಗಿದ |
| ಬೊಮ್ಮ ಮೂರುತಿ ನಮ್ಮ ಪುರಂದರ ವಿಠಲನೆ | ಬೊಮ್ಮ ಮೂರುತಿಯಾದ ಪುರಂದರ ವಿಠಲನೆ |
| ನಿಮ್ಮ ಆಜ್ಞೆಯ ಮೀರಿ ಬದುಕಿ ಬಾಳುವರೆ    \|\| 5 \|\| | ನಮ್ಮ ಅಳವಲ್ಲ ವಿಧಿಮೀರಿ ಬಾಳುವರೇ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಐದು ವರ್ಷದ ತರಳ** = ಧ್ರುವ

**ಮಲತಾಯಿ** = ಸುರುಚಿ

**ಐದೆ** = ಹೆಚ್ಚಾಗಿ

**ಖಳ** = ನೀಚ

**ವಿಪರೀತ** = ಬಹಳ, ಪ್ರಚಂಡ

**ಷಡುರಥ** = ದ್ರೋಣ, ಕರ್ಣ, ಜಯದ್ರಥ

**ಸೆಣಸು** = ಹೋರಾಡು

**ಅಣಕವಿಲ್ಲದೆ** = ಕುಂದಿಲ್ಲದೆ

**ಅಸು** = ಪ್ರಾಣ

**ತ್ರಿಣಯಸಖ** = ಕೃಷ್ಣ

**ಬ್ರಹ್ಮಶಿರ** = ಬ್ರಹ್ಮನು ಶಿವನನ್ನು ನಿಂದಿಸಿದುದರಿಂದ ಶಿವನು ಬ್ರಹ್ಮನ ಐದನೆ ತಲೆ (ಕಪಾಲ) ಯನ್ನು ಚಿವುಟಲು, ಅದು ಅವನ ಕೈಗೆ ಅಂಟಿಕೊಂಡಿತು. ಅದರೊಂದಿಗೆ ಶಿವನು ಭೈರವ ರೂಪದಿಂದ ಭಿಕ್ಷಾಟನೆ ಮಾಡುತ್ತಾ ತಿರುಗಿದನು. ಕೊನೆಗೆ ಕಾಶಿ ಕ್ಷೇತ್ರದಲ್ಲಿ ಸ್ನಾನ ಮಾಡಲು ಅದು ಕಳಚಿತು.

**Classification:** Keerthane
**Ankita:** purandara vittala
**Location:** NA
**Category:** jeevana darshana, virakti
**Group Words:** sita, rama, Lakshmana, sripati, karma, vidhi, tayi, sittu, tande, papa, draupadi, pandava, brahma, kaurava
**Pravachana:** NA
**Explanation:** NA